**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 290/2022

ಪಿಡಬ್ಲು :10 ಸಿಡಬ್ಲು :13

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ಮಲ್ಲಪ್ಪ ಅಲಿಯಾಸ ಮಲ್ಲೇಶ ಮಾದರ |
| ತಂದೆಯ ಹೆಸರು | : ಶ್ರೀ.ಯಮನಪ್ಪ ಮಾದರ |
| ವಯಸ್ಸು | : 25 ವರ್ಷ |
| ಉದ್ಯೋಗ | : ಚಾಲಕ |
| ವಾಸ್ತವ್ಯ | : ಸುಟ್ಟಟ್ಟಿ ಗ್ರಾಮ, ತಾಲೂಕುಃ ಅಥಣಿ |
| ದಿನಾಂಕ | : 02-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1, ಚಾಸಾಃ 8 ರಿಂದ ಚಾಸಾಃ 12 ನಮ್ಮ ಊರಿನವರು, ಅವರು ತೋಟದಲ್ಲಿ ವಾಸ ಇರುತ್ತಾರೆ. ಚಾಸಾಃ 14 , ಚಾಸಾಃ 15, ಚಾಸಾಃ 16, ಚಾಸಾಃ 17 ಗೊತ್ತಿರುತ್ತಾರೆ. ಆರೋಪಿತರು ನನಗೆ ಗೊತ್ತಿರುತ್ತಾರೆ.

2. ಚಾಸಾಃ 8 ಸುರೇಶ ಅವರಿಗೆ ನಾನು ಚಾಸಾಃ 17 ರಾಜಶ್ರೀ ಅವರ ಮೊಬೈಲ ನಂಬರ ನೀಡಿರುವುದಿಲ್ಲ. ಆ ವಿಚಾರವಾಗಿ ಯಾರೂ ನನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ. ಚಾಸಾಃ 8 ಸುರೇಶ ಅವರ ಮೇಲೆ ಹಲ್ಲೆ ಮಾಡಿದ ವಿಚಾರ ನನಗೆ ಗೊತ್ತಿರುವುದಿಲ್ಲ. ಚಾಸಾಃ 1 ಸುನೀಲ ಅವರು ಆರೋಪಿತರ ಮೇಲೆ ದೂರು ಕೊಟ್ಟ ವಿಚಾರ ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದಲ್ಲಿ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

" ಚಾಸಾಃ 17 ರಾಜಶ್ರೀ ಅವರಿಗೆ ಅಥಣಿಯಲ್ಲಿರುವ ಮಹೇಶ ಬಾಸಿಂಗೆ ಇವರೊಂದಿಗೆ ಮದುವೆ ಮಾಡಿಕೊಟ್ಟಿರುತ್ತಾರೆ, ರಾಜಶ್ರೀ ಅವರು ಊರಿಗೆ ಬಂದಾಗ ಅವರ ಮೊಬೈಲ ರಿಚಾರ್ಜ್ ಮಾಡಲು ಮೊಬೈಲ ನಂಬರ ಬರೆದುಕೊಟ್ಟಿದ್ದಳು, ಅದು ನನ್ನ ಹತ್ತಿರ ಇತ್ತು,ನಮ್ಮೂರ ಸುರೇಶ ಗಾಡಿವಡ್ಡರ ಇವನು ನನಗೆ ಭೇಟಿಯಾಗಿ ರಾಜಶ್ರೀ ಅವರ ಮೊಬೈಲ ನಂಬರ ಇದ್ದರೆ ಕೊಡು ಅವಳ ಸಂಗಡ ಮಾತನಾಡಬೇಕು ಅಂತಾ ಹೇಳಿದಾಗ ನಾನು ಅವನಿಗೆ ಪೋನ ನಂಬರ ಕೊಟ್ಟಿದ್ದೇನು ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-22 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ನ್ಯಾಯಾಲಯದ ಮುಂಜಾನೆ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಮಧ್ಯಾಹ್ನದ ಅವಧಿಗೆ ಕಾಯ್ದಿರಿಸಲಾಯಿತು.**

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

" ದಿನಾಂಕಃ 14-09-2022 ರಂದು ಸಂಜೆ 06:30 ರಿಂದ 07:30 ಗಂಟೆಯ ಮಧ್ಯದ ಸಮಯದಲ್ಲಿ ನಾನು ಊರಿನ ಕ್ರಾಸದಲ್ಲಿದ್ದಾಗ 7 ನೇ ಆರೋಪಿ ರಾಜು

ಮಲಬಾದಿ ಇತನು ನನ್ನ ಹತ್ತಿರ ಬಂದು ಕೆಲಸ ಇದೆ ಎಂದು ಹೇಳಿ, 1 ನೇ ಆರೋಪಿ ಮಲ್ಲಪ್ಪ ಮಾಳಿ ಇವರ ಜಮೀನಿನಲ್ಲಿ ಇದ್ದ ಬಾವಿ ಹತ್ತಿರ ಕರೆದುಕೊಂಡು ಹೋದನು, ಅಲ್ಲಿ ನಮ್ಮ ಊರಿನ ಸುರೇಶ ಹನಮಂತ ಗಾಡಿವಡ್ಡರ ಇವನೂ ಸಹ ಇದ್ದನು, ಅವನಿಗೆ ಮಲ್ಲಪ್ಪ ಮಾಳಿ ಮತ್ತು ಸುರೇಶ ಮಾಳಿ ಇವರು ಕರೆಂಟ ಮೋಟಾರ ಕೇಬಲ ವಾಯರ ನಿಂದ ಬೆನ್ನು ಮೇಲೆ ಹೊಡೆಯುತ್ತಿದ್ದರು, ಆಗ ಸುರೇಶ ಗಾಡಿವಡ್ಡರ ಇವನಿಗೆ ರಾಜಶ್ರೀ ನಂಬರನ್ನು ಕೊಟ್ಟವರು ಯಾರು ಎಂದು ಕೇಳಿದಾಗ ಆತನು ನನ್ನ ಹೆಸರು ಹೇಳಿದನು, ನಾನು ಅವನಿಗೆ ರಾಜಶ್ರೀ ನಂಬರನ್ನು ನಾನೇ ಕೊಟ್ಟಿದ್ದೇನೆ ಅಂತಾ ಅವರ ಮುಂದೆ ಹೇಳಿದಾಗ ಮಲ್ಲಪ್ಪ ಮತ್ತು ಸುರೇಶ ಇವರು ಅದೇ ಕೇಬಲ ವಾಯರ್ ನಿಂದ ನನ್ನ ಬೆನ್ನಿಗೆ ಹೊಡೆದರು, ನನಗೆ ಅವಾಚ್ಯ ಶಬ್ದಗಳಿಂದ ಬೈದು ಕಳುಹಿಸಿ ಕೊಟ್ಟರು, ನನಗೆ ಸಣ್ಣ ಪುಟ್ಟ ಗಾಯ ಆಗಿದ್ದರಿಂದ ನಾನು ಆಸ್ಪತ್ರೆಗೆ ಹೋಗದೇ ಮನೆಯಲ್ಲಿ ಉಪಚಾರಿಸಿಕೊಂಡಿದ್ದೇನೆ, ನಾನು ಆಸ್ಪತ್ರೆಗೆ ಹೋಗಿ ತೋರಿಸಿರುವುದಿಲ್ಲ. " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆ ಭಾಗವನ್ನು ನಿಪಿ– 23 ಎಂದು ಗುರುತಿಸಲಾಯಿತು . ನಾನು ನಿಪಿ–22 ಮತ್ತು ನಿಪಿ–23 ರಂತೆ ಹೇಳಿಕೆನೀಡಿದ್ದು ಸತ್ಯ ಇದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಮ್.ಎಸ್.ಪಿ ವಕೀಲರಿಂದ**

ಆರೋಪಿತರ ಪರ ವಕೀಲರು ಗೈರು ಹಾಜರಾಗಿರುತ್ತಾರೆ. ಆರೋಪಿತರಿಗೆ ಪ್ರಶ್ನೆಗಳನ್ನು ಕೇಳಲು ಅವಕಾಶ ಕೊಟ್ಟಿದ್ದು , ಅವರು ಏನು ಇಲ್ಲ ಎಂದು ಹೇಳಿರುತ್ತಾರೆ. ಆ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.